ಜೊತೆ ನೀನ್ ಏನ್ ಆಟ ಆಡ್ತಿದ್ದೆ?" ಆ ಯಜಮಾನಿಯ ಗಂಟಲು ಬಹಳ ಜೋರಾಗಿತ್ತು. "ನಿನಗೆ ನಾಚಿಕೆಯಾಗುವುದಿಲ್ಲವೇ? ಛೀ! ಛೀ! ನೋಡ್ರೇ, ಎಲ್ರೂ ಕೇಳಿಸ್ಕೊಳ್ಳಿ. ಎಂಥ ಹುಡುಗಿಯನ್ನ ನಾನು ಇಷ್ಟು ದಿನ ಮನೇಲಿಟ್ಕೊಂಡು ನೋಡ್ಕೊಂಡಿದಿನಿ. ಬೀದಿ ಬಸವಿಗೂ ನಿಂಗೂ ಏನೇ ವ್ಯತ್ಯಾಸ? ಥೂ! ನಾಚಿಕೆಯಿಲ್ಲದೋಳೆ?"

ನನಗೆ ಅಸ್ವಸ್ಥತೆ ಕಾಡತೊಡಗಿತು. ಹುಡುಗಿಯ ಬಗ್ಗೆ ನಂಗೆ ಅಯ್ಯೋ ಪಾಪ ಅನಿಸಿತು. ನಿಜವಾಗ್ಲೂ ಚಿಕ್ಕ ಹುಡುಗಿ, ರಾತ್ರಿಹೊತ್ತು ಯಾರೋ ಪೋಲಿ ಹುಡುಗನ ಜೊತೆ ಯಾಕೆ ಹೋಗಿದ್ದಳು?...

ಪಾರ್ಲರ್‌ನಲ್ಲಿದ್ದ ಹುಡುಗಿಯರ ಗುಜುಗುಜು, ಪಿಸಪಿಸ ಜಾಸ್ತಿಯಾಯಿತು. ಎಲ್ಲರಿಗೂ ಆಶ್ಚರ್ಯ, ಯಾರೂ ಜುಂಪಾನ ಪರವಾಗಿರಲಿಲ್ಲ. ಅದು ನನಗೆ ಗೊತ್ತಾಯಿತು. ಅವರೆಲ್ಲ ತಮ್ಮತಮ್ಮಲ್ಲೇ ತಾವು ನೋಡಿದ್ದರ ಬಗ್ಗೆ ಮಾತಾಡಿಕೊಳ್ತಾಯಿದ್ರು ಮನೆಯ ಅಕ್ಕಪಕ್ಕದಲ್ಲಿ, ಸ್ನೇಹಿತರಲ್ಲಿ, ತಮಗೆ ಗೊತ್ತಿರೋರ ಮನೆಯಲ್ಲಿ ಈ ರೀತಿ ಘಟನೆ ಆಗಿತ್ತು, ಎಲ್ಲಾ ಸಂದರ್ಭಗಳು ಹೆಚ್ಚುಕಡಿಮೆ ಒಂದೇ ರೀತಿ ಕೊನೆಯಾಗಿವೆ. ಆ ಹುಡುಗೀರ ಕತೆ ನಿಜವಾಗ್ಲೂ ಮುಗಿದೋಗಿದೆ ಅಂತ ಅವರೆಲ್ಲ ಮಾತಾಡಿಕೊಳ್ತಾಯಿದ್ರು, ಅವರ್‍ಯಾರಿಗೂ ಈ ರೀತಿ ಮಾಡೋ ಧೈರ್ಯಾನೂ ಇಲ್ಲ, ಹೀಗೆಲ್ಲ ಮಾಡೋದೂ ಇಲ್ಲ. ನನ್ನ ಕೂದಲು ಕತ್ತರಿಸುತ್ತಿದ್ದ ಹುಡುಗಿ ಬಹಳ ಉತ್ತೇಜಿತಳಾಗಿಬಿಟ್ಟಳು, ಅವಳ ಕೈಯಲ್ಲಿ ದೊಡ್ಡ ಕತ್ತರಿ. ಕಣ್ಣು ಇನ್ನೆಲ್ಲೋ! "ಹೇ, ಹೇಯ್" ನಾನು ಅವಳನ್ನು ತಡೀಬೇಕಾಯಿತು. ನನ್ನ ಕೂಗು ಕೇಳೀ ಯಜಮಾನಿ ನನ್ನ ಕೂದಲು ಕತ್ತರಿಸುತ್ತಿದ್ದ ಹುಡುಗಿಗೆ ಜೋರಾಗಿ ಗದರಿದಳು,

"ಹೇ, ಕಾಕೊಲಿ, ಏನ್ ಮಾಡ್ತಾಯಿದಿಯಾ? ಈ ಸಲ ನೀನು ನನ್ನ ಜೈಲಿಗೆ ಕಳಿಸ್ತೀಯಾ? ಎಷ್ಟು ಸಲ ಹೇಳಿದಿನಿ ಕೆಲಸ ಮಾಡುವಾಗ ಅತ್ತಿತ್ತ ನೋಡಬೇಡ ಅಂತ". ಅವಳು ಜೈಲಿಗೆ ಹೋಗಬೇಕಾದ್ರೆ ನಾನು ಕಣ್ಣು ಕಳ್ಕೊಬೇಕಾಗಬಹುದು. ನನಗೆ ಹೆದರಿಕೆಯಾಯ್ತು, ಜೊತೆಗೆ ನಾಚಿಕೆಯೂ ಆಯಿತು. ಹುಡುಗಿ ಬಹಳ ಜಾಣೆ. ನನಗೆ ಹೇಳಿದಳು, "ಸಾರಿ ದೀದಿ, ಹೆದರ್ಕೋಬೇಡಿ, ನಾನು ಸರಿಯಾಗೆ ನೋಡ್ತಾಯಿದಿನಿ". ಈಗ ಎಲ್ಲವೂ ತಣ್ಣಗಾಯಿತು.

ಸ್ವಲ್ಪ ಹೊತ್ತಾದ ಮೇಲೆ ಯಜಮಾನಿ ಹತಾಶೆಯಿಂದ ಹೇಳಿದಳು, "ನೀನು ಹೀಗೆ ಮಾಡ್ತಿಯಾ ಅಂತ ಅಂದ್ಕೊಂಡಿರಲಿಲ್ಲ ಜುಂಪಾ, ನಿನ್ನನ್ನು ಎಷ್ಟು ಚೆನ್ನಾಗಿ ನೋಡ್ಕೊತಿದ್ದೆ! ಆವತ್ತು ನೀನು ಮೈಮೇಲೆಲ್ಲ ಗುಳ್ಳೆ ಎದ್ದಿವೆ ಎಂದಾಗ... ನನಗೆ ಆ ತರ ಎಷ್ಟೊಂದು ಆಯ್ತುವೆ, ಅದಕ್ಕೆ ತಲೆ ಕೆಡಿಸ್ಕೊಳ್ಳೋದೇ ಇಲ್ಲ ಆದರೆ ನಿಂಗೆ ಡಾಕ್ಟರ್ ಹತ್ತಿರ ಹೋಗು, ದುಡ್ಡು ಕೊಡ್ತೀನಿ ಅಂದೆ. ಈಗಲೂ ಹೇಳ್ತೀನಿ, ಅಮ್ಮನ ಜೊತೆ ಡಾಕ್ಟರ್ ಹತ್ರ ಹೋಗು, ನಾನು ದುಡ್ಡು ಕೊಡ್ತೀನಿ. ನಾನಂತೂ ನಿನ್ನ ಸ್ವಂತ ಮಗಳು ಅಂತಾನೆ ತಿಳ್ಕೊಂಡಿದ್ದೆ. ಇಷ್ಟು ಹೇಳಬಲ್ಲೆ ಚಂಪಾ, ನಮ್ಮ ಮನೆಯಲ್ಲಿ ಸಿಕ್ಕಷ್ಟು ಅನುಕೂಲ, ಕಾಳಜಿ ನಿನ್ನ ಮಗಳಿಗೆ ಬೇರೆ ಕಡೆ ಸಿಗೋದಿಲ್ಲ. ಕೆಲಸದವರು ಸಿಗೋದೇನು ಕಷ್ಟವೇ? ಅಕ್ಕಿಕಾಳು ಎರಚಿದರೆ ಕಾಗೆಗೇನು ಬರವೇ. ಆದರೂ ನಾನು ಹೇಳುದಿಲ್ಲ. ನೀನು ಕೆಲಸ ಬಿಟ್ಟರೆ ನಂಗೇನೂ ಕಷ್ಟ ಇಲ್ಲ ಅಂತ, ಕಷ್ಟ ಆಗುತ್ತೆ, ಹಂಗಂತ ನೀನು ನಿನ್ನ ಇಷ್ಟ ಬಂದಂಗೆ ಮಾಡ್ತೀಯಾ? ನಾನು ನಿನಗೆ ಎಷ್ಟು ಸಲ ಹೇಳಿದಿನಿ, ದುಡ್ಡು ಹಾಳು ಮಾಡಬೇಡ ಅಂತ. ತಿಂಗಳ ಸಂಬಳಾನ ಕೈಯಲ್ಲಿ ಮುಟ್ಟೋದೇಬೇಡ, ಅರ್ಧ ಅಮ್ಮನಿಗೆ ಕೊಡು, ಅರ್ಧ ಬ್ಯಾಂಕಲ್ಲಿ ಮಡಗು ಅಂತ. ಒಂದಷ್ಟು ದುಡ್ಡು ಸೇರಿದರೆ ಒಡವೆ ಮಾಡಿಸ್ಕೊಬೋದು. ಈ ತರ ನಿನಗೆ ಯಾರೂ ಹೇಳ್ತಾರೆ ಹೇಳು? ನಾನಂತೂ ನಿನಗೆ ಚೆನ್ನಾಗಿ ಮದುವೆ ಮಾಡಬೇಕು ಅಂತ ಅಂದ್ಕೊಂಡಿದ್ದೆ, ನಿಮ್ಮಮ್ಮಂಗೆ ಎಷ್ಟು ಆಗುತ್ತೋ ಅಷ್ಟು ಹಾಕಲಿ, ಉಳಿದದ್ದು ನಾನು ಹಾಕಬೇಕು ಅಂತ. ನೀನು ಆ ಪೋಲಿ ಹುಡುಗನ ಜೊತೆ ಹೋಗಿ ಹೆಸರು ಕೆಡಿಸ್ಕೊಂಡು ಬಂದೆಯಾ?"

"ನಾನೇನೂ ಕೆಟ್ಟ ಕೆಲಸ ಮಾಡಿಲ್ಲ. ಅವನು ಪೋಲಿ ಹುಡುಗ ಅಲ್ಲ" ಜುಂಪಾ ತಲೆ ಕೆಳಗೆ